Date : 18.03.2026

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಸಿ.ಟಿ. ವಕೀಲರಿಂದ –**

ಐಮಂಗಲ ಗ್ರಾಮದ 5 ಆಸ್ತಿಗಳ ಬಗ್ಗೆ ನೊಂದಣಿ ಕ್ರಯಪತ್ರಗಳಾಗಿದ್ದು, ಆ ಬಗ್ಗೆ ಇರುವ 5 ನೊಂದಣಿ ಕ್ರಯಪತ್ರಗಳ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–11 ರಿಂದ 15 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿದಂತೆ ಎದುರುದಾರರ ವಿರುದ್ಧ ಆದೇಶ ಮಾಡಲು ಕೋರುತ್ತೇನೆ.

**– ಪಾಟೀ ಸವಾಲು –1 ನೇ ಎದುರುದಾರ ಪರ ಶ್ರೀ ಡಿ.ಜಿ.ಪಿ. ವಕೀಲರಿಂದ –**

ಅರ್ಜಿಯಲ್ಲಿ ಕಾಣಿಸಿದ ನನ್ನ ಮಾಲೀಕತ್ವದ ಜಮೀನು ಖುಷ್ಕಿ ಜಮೀನು ಎಂದರೆ ಸರಿ. ಅರ್ಜಿಯಲ್ಲಿ ಕಾಣಿಸಿದ ಜಮೀನು ಇರುವ ಐಮಂಗಲ ಗ್ರಾಮವು ಚಿತ್ರದುರ್ಗ ಮತ್ತು ಹಿರಿಯೂರು ಪಟ್ಟಣದಿಂದ 15 ಕಿಮೀ ದೂರದಲ್ಲಿ ಇರುವುದು ಎಂದರೆ ಸರಿ. ಅರ್ಜಿಯಲ್ಲಿ ಕಾಣಿಸಿದ ಜಮೀನು ರಾಷ್ಟ್ರೀಯ ಹೆದ್ದಾರಿ–48 ಕ್ಕೆ ಹೊಂದಿಕೊಂಡಂತೆ ಇರದೇ, ಅದು ರಾ.ಹೆ.ಯಿಂದ ದೂರ ಇರುವುದೆಂದು ಸೂಚಿಸಲಾಗಿ ಇಲ್ಲಾ, ಸದರಿ ಜಮೀನು ರಾ.ಹೆಯಿಂದ ½ ಫರ್ಲಾಂಗ್ ದೂರದಲ್ಲಿ ಇರವುದೆಂದು ಹೇಳುತ್ತಾರೆ. ನನ್ನ ಮಾಲೀಕತ್ವದ ಜಮೀನು ಮೇಲೆ ಹೇಳಿದಂತೆ ರಾ.ಹೆ.ಯಿಂದ ½ ಫರ್ಲಾಂಗ್ ದೂರದಲ್ಲಿ ಇರುವುದೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ನಕಾಶೆ ಅಥವಾ ಸೂಕ್ತ ದಾಖಲೆ ಹಾಜರುಪಡಿಸಿಲ್ಲವೆಂದರೆ ಸರಿ.

2) 1 ನೇ ಎದುರುದಾರರು ನಮ್ಮ ಗ್ರಾಮದ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಮೊದಲು ಯಾವ ಯಾವ ಜಮೀನುಗಳು ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಹೇಳುತ್ತಾ, ಆ ಜಮೀನುಗಳ ಮಾಲೀಕರಿಗೆ ನೋಟೀಸ್ ನೀಡಿ, ನಮ್ಮ ಊರಿನಲ್ಲಿ ಭೂ ಮಾಲೀಕರ ಸಭೆ ಕರೆದಿದ್ದರು ಎಂದರೆ ಸರಿ. ಸದರಿ ಸಭೆಯಲ್ಲಿ ನಾನು ಭಾಗವಹಿಸಿರಲಿಲ್ಲ. ಸದರಿ ಸಭೆಯಲ್ಲಿ ಇಂತಿಂತಹ ಆಸ್ತಿಗಳಲ್ಲಿ ಭೂ ಸ್ವಾಧೀನ ಪಡಿಸಿಕೊಳ್ಳುತ್ತಿದ್ದು, ಅದಕ್ಕೇನಾದರೂ ತಮ್ಮದು ತಕರಾರು ಇದ್ದಲ್ಲಿ ಭೂ ಸ್ವಾಧೀನಾಧಿಕಾರಿಗೆ

ತಕರಾರು ಸಲ್ಲಿಸಬಹುದು ಎಂದು ಸಭೆಯಲ್ಲಿದ್ದ ಜನರಿಗೆ ಅಧಿಕಾರಿಗಳು ತಿಳಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸಭೆಯಲ್ಲಿ ಕೂಡಿದ ಜನರು ತಮ್ಮದೇನು ತಕರಾರು ಇಲ್ಲವೆಂದು ಅಧಿಕಾರಿಗಳಿಗೆ ತಿಳಿಸಿರುವ ಬಗ್ಗೆ ನನಗೆ ಗೊತ್ತಿಲ್ಲ.

3) ಅರ್ಜಿಯಲ್ಲಿ ಕಾಣಿಸಿದ ನನ್ನ ಮಾಲೀಕತ್ವದ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳುವಾಗ, 1 ನೇ ಎದುರುದಾರರ ಕಛೇರಿಯ ಸಿಬ್ಬಂದಿ ಹಾಗೂ ಸರ್ವೆ ಅಧಿಕಾರಿಗಳು ಬಂದು ನನ್ನ ಸಮಕ್ಷಮದಲ್ಲಿ ಆಸ್ತಿಯನ್ನು ಸರ್ವೆ ಮಾಡಿರುವರು ಎಂದರೆ ಸರಿ. ನನ್ನ ಮಾಲೀಕತ್ವದ ಜಮೀನನ್ನು ಎದುರುದಾರರು ಭೂ ಸ್ವಾಧೀನ ಪಡಿಸಿಕೊಂಡ ಬಾಬ್ತು ಪರಿಹಾರವೆಂದು ನನಗೆ ರೂ. 1,00,71,565/- ಹಣ ಪಾವತಿಸಿರುವರು ಎಂದರೆ ಸರಿ. ಸದರಿ ಹಣವನ್ನು ನಾನು ಪಡೆಯುವ ಕಾಲಕ್ಕೆ ಯಾವುದೇ ತಕರಾರು ವ್ಯಕ್ತಪಡಿಸದೇ ಆ ಹಣವನ್ನು ಎದುರುದಾರರಿಂದ ತೆಗೆದುಕೊಂಡಿರುವೆನು ಎಂದರೆ ಸರಿ. ಸಾಕ್ಷಿ ಸ್ವತಃ ಹೇಳುವುದೇನೆಂದರೆ, ಮೇಲೆ ಹೇಳಿದ ಹಣ ಪಡೆಯುವಾಗ ನಾನು ಎದುರುದಾರರಿಗೆ ಮೌಖಿಕವಾಗಿ ತಕರಾರು ಇದೆ ಎಂದು ಹೇಳಿರುವುದಾಗಿ ಹೇಳುತ್ತಾರೆ. ನಿಪಿ-11 ರಿಂದ 15 ಎಂದು ಗುರುತಿಸಿದ ದಾಖಲೆಗಳಲ್ಲಿ ಕಾಣುವ ಜಮೀನುಗಳಿಂದ ಅರ್ಜಿಯಲ್ಲಿ ಕಾಣಿಸಿದ ಜಮೀನು ಸುಮಾರು ದೂರದಲ್ಲಿ ಇರುವುದು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ, ಆ ದಾಖಲೆಗಳಲ್ಲಿ ಕಾಣುವ ಜಮೀನುಗಳಿಂದ ನನ್ನ ಜಮೀನು ಅಂದಾಜು ½ ಕಿಮೀ ದೂರದಲ್ಲಿ ಇರುವುದೆಂದು ಹೇಳುತ್ತಾರೆ. ಆ ರೀತಿ ನಮ್ಮ ಜಮೀನು ½ ಕಿಮೀದೂರದಲ್ಲಿ ಇರುವುದೆಂದು ತೋರಿಸಲು ನ್ಯಾಯಾಲಯಕ್ಕೆ ನಕಾಶೆ ಅಥವಾ ಸೂಕ್ತ ದಾಖಲೆ ನಾನು ಹಾಜರುಪಡಿಸಿಲ್ಲವೆಂದರೆ ಸರಿ.

4)ಮುಖ್ಯವಿಚಾರಣೆ ಕಂಡಿಕೆ-3 ರಿಂದ 6 ರಲ್ಲಿ ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಮುಖ್ಯವಿಚಾರಣೆಯ ಕಂಡಿಕೆ-4 ರಲ್ಲಿ ಕಾಣಿಸಿದಂತೆ ಭೂಸ್ವಾಧೀನ ಪಡಿಸಿಕೊಂಡ ಜಮೀನಿನ ಮೌಲ್ಯ ಒಂದು ಗುಂಟೆಗೆ ರೂ.60 ರಿಂದ 70,000/- ಇರುವುದೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಕಿಲ್ಲವೆಂದರೆ ಸರಿ. ಎದುರುದಾರರು ಮೇಲೆ ಹೇಳಿದಂತೆ ನನಗೆ ಕಾನೂನು ಬದ್ಧವಾಗಿ/ಕಾಯ್ದೆ ಯನ್ವಯ ಪರಿಹಾರವನ್ನು ಈಗಾಗಲೇ ಕೊಟ್ಟಿದ್ದು, ಅದು ಸೂಕ್ತ ಇರುವುದು ಎಂದರೆ ಸರಿಯಲ್ಲ. ನನ್ನ ಮಾಲೀಕತ್ವದ ಭೂಸ್ವಾಧೀನ ಪಡಿಸಿಕೊಂಡ ಜಮೀನಿಗೆ ಸಂಬಂಧಿಸಿದಂತೆ ಎದುರುದಾರರು ಈಗಾಗಲೇ ನನಗೆ ಸೂಕ್ತ ಪರಿಹಾರವನ್ನು

ನೀಡಿದ್ದು, ಆದರೂ ಕೂಡ ನಾನು ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಅಂಶದ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿರುವೆನೆಂದರೆ ಸರಿಯಲ್ಲ.

**– ಪಾಟೀ ಸವಾಲು – 2 ನೇ ಎದುರುದಾರ ಪರ ಶ್ರೀ ವಿ.ಡಿ.ಆರ್. ವಕೀಲರ ಪರ ಶ್ರೀ ಕೆ.ಪಿ.ಎಂ. ವಕೀಲರಿಂದ –**

ವಕೀಲರು ಹಾಜರಿದ್ದು, ಈ ಮೇಲೆ 1 ನೇ ಎದುರುದಾರರು ಮಾಡಿರುವ ಪಾಟೀ ಸವಾಲನ್ನು 2 ನೇ ಎದುರುದಾರರ ಪರ ಪಾಟೀ ಸವಾಲು ಎಂದು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)
*ಓದಿ ಹೇಳಿ ಕೇಳಿ ಸರಿ ಇದೆ.*

*1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಚಿತ್ರದುರ್ಗ.*